ಮಹಿಳಾದಿನ ವಿಶೇಷ

# ‘ಪಕ್ಕದ್ಮನೆ ಹುಡುಗಿ’ ಬದಲಾಗಿದ್ದಾಳೆ

**‘ಬುಲ್ ಬುಲ್ ಮಾತಾಡಕಿಲ್ವಾ’ ಎಂದು ಬೆನ್ನುಬಿದ್ದು ಪೀಡಿಸುವ ನಾಯಕನಿಗೆ ಮನಸೋಲುವ ನಾಯಕಿಯ ಚಿತ್ರ ಸಿನಿಮಾಜಗತ್ತಿನ ಜನಪ್ರಿಯ ಸೂತ್ರ. ವಾಸ್ತವದಲ್ಲಿನ ಹೆಣ್ಣಿನ ಚಿತ್ರವೇ ಬೇರೆ. ಹೆಣ್ಣನ್ನು ತೆರೆಯ ಮೇಲೆ ಪರಾವಲಂಬಿಯಾಗಿ ತೋರಿಸುವುದಕ್ಕೂ ಸಮಾಜದಲ್ಲಿ ‘ಅವಳ’ ಕುರಿತು ರೂಪುಗೊಂಡಿರುವ ಸಿದ್ಧದೃಷ್ಟಿಗೂ ಪರಸ್ಪರ ಸಂಬಂಧವಿದೆ ಎನ್ನುವ ಯುವ ನಟಿ ಸಂಯುಕ್ತಾ ಹೊರನಾಡು, ‘ಗರ್ಲ್ ನೆಕ್ಸ್ಟ್ ಡೋರ್’ ಎಂಬ ಪರಿಕಲ್ಪನೆಯನ್ನು ಬ್ಯಾನ್ ಮಾಡಬೇಕು ಎನ್ನುತ್ತಾರೆ.**



ದಿನವೂ ನಾವು ಏನು ನೋಡ್ತೀವಿ, ಏನು ಕೇಳ್ತೀವಿ, ಏನನ್ನು ಓದ್ತೀವಿ ಎನ್ನುವುದು ನಮ್ಮ ಮನಸ್ಥಿತಿಯನ್ನು ರೂಪಿಸುತ್ತದೆ. ನಾವು ನೋಡುವ ಸಿನಿಮಾ ಆಗಲಿ, ಹಾಡುಗಳಾಗಲಿ ನಮ್ಮ ವ್ಯಕ್ತಿತ್ವವನ್ನು, ಜೀವನದೃಷ್ಟಿಯನ್ನು ರೂಪಿಸುತ್ತಿರುತ್ತವೆ.

ಸಿನಿಮಾ ಕ್ಷೇತ್ರಕ್ಕೇ ಬರೋಣ. ಎಷ್ಟೊಂದು ಸಿನಿಮಾದಲ್ಲಿ ನೋಡ್ತಾನೇ ಇರ್ತೀವಿ. ಹುಡುಗ ಹುಡುಗಿಯನ್ನು ಅಡ್ಡಗಟ್ಟಿ ರೇಗಿಸುತ್ತಾನೆ. ಹಿಂಬಾಲಿಸಿ ಚುಡಾಯಿಸುತ್ತಾನೆ. ಅವನು ಹೀರೊ. ಹೀರೊಯಿನ್ ಕೂಡ ಹಾಗೆ ಚುಡಾಯಿಸಿದ ಹುಡುಗನನ್ನು ಪ್ರೇಮಿಸಲು ಶುರುಮಾಡಿಬಿಡುತ್ತಾಳೆ. ಆದರೆ ವಾಸ್ತವದಲ್ಲಿ ನಮ್ಮನ್ನು ಯಾರಾದ್ರೂ ರಸ್ತೆಯಲ್ಲಿ ಅಡ್ಡಗಟ್ಟಿದರೆ ಪ್ರೀತಿ ಹುಟ್ಟುವುದಿಲ್ಲ; ಭಯವಾಗುತ್ತದೆ. ಹಾಡುಗಳೂ ಅಷ್ಟೆ, ಹುಡುಗ ಹುಡುಗಿಯನ್ನು ಹಿಂಬಾಲಿಸುತ್ತಿರುತ್ತಾನೆ. ಅವಳಿಗೆ ಇಷ್ಟ ಆಗ್ತಾ ಇರುವುದಿಲ್ಲ. ಆದರೂ ಮೇಲೆ ಮೇಲೆ ಹೋಗಿ ಬೀಳ್ತಾ ಇರ್ತಾನೆ. ಆಮೇಲೆ ಅವಳಿಗೆ ಅವನ ಮೇಲೆ ಪ್ರೀತಿ ಆಗಿಬಿಡುತ್ತದೆ. ಅವನಿಗೆ ಒಳ್ಳೆಯ ಗುಣಗಳಿರಲ್ಲ. ಶ್ರೀಮಂತಿಕೆ ಇರುವುದಿಲ್ಲ. ಕೆಲಸ ಇರುವುದಿಲ್ಲ. ಪ್ರತಿಭೆ ಇರಲ್ಲ. ಎಲ್ಲೋ ಕುಡಿತಾ ಇರ್ತಾನೆ. ಅಪ್ಪ ಅಮ್ಮ ಅವನನ್ನು ಬಯ್ತಾ ಇರ್ತಾರೆ. ಹೀಗಿದ್ದೂ ಆ ಹುಡುಗಿ ಅಂಥವನನ್ನು ಯಾಕೆ ಪ್ರೀತಿಸಬೇಕು? ಈ ಥರ ಆಗಲ್ಲ. ಈಗೂ ಆಗಲ್ಲ, ನೂರು ವರ್ಷಗಳ ಹಿಂದೆಯೂ ಆಗಿಲ್ಲ. ಮುಂದೆಯೂ ಆಗಲ್ಲ.

ನಾನಂತೂ ಅಂಥ ಪಾತ್ರಗಳನ್ನು ಒಪ್ಪಿಕೊಂಡಿಲ್ಲ. ಒಪ್ಪಿಕೊಳ್ಳುವುದೂ ಇಲ್ಲ.

ಇತ್ತೀಚೆಗೆ ನನಗೊಂದು ಕತೆ ಬಂತು. ಅದರಲ್ಲಿ ನಾಯಕ ಕೈಕೊಟ್ಟಾಗ ನಾಯಕಿ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ‘ಇವಳ್ಯಾಕೆ ಅವನ ಹಿಂದೆ ಹೋಗಿ ಆತ್ಮಹತ್ಯೆ ಮಾಡಿಕೊಂಡು ಸಾಯ್ತಾಳೆ? ಹೀಗೆಯೇ ಪ್ರೇಮಿಯಿಂದ